ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

---

ಸಂಖ್ಯೆ : ವಾಇ : ಜಂ ನಿ : ಸುಮಪ : 2021–22 ದಿನಾಂಕ : 26–08–2021

# ಮಾಧ್ಯಮ ಆಹ್ವಾನ
# Media Invitation

**ಕೃಷಿ ಇಲಾಖೆಯಲ್ಲಿನ ಪ್ರಗತಿ ಸಾಧನೆ ಕುರಿತು**

**ಕೇಂದ್ರದ ಕೃಷಿ ಖಾತೆ ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ ಹಾಗೂ ರಾಜ್ಯ ಕೃಷಿ ಸಚಿವರಾದ ಬಿ.ಸಿ.ಪಾಟೀಲ್ ಅವರಿಂದ ಪತ್ರಿಕಾಗೋಷ್ಠಿ:**

**ದಿನಾಂಕ: 27–08–2021 ಶುಕ್ರವಾರ, ಸಮಯ: ಮಧ್ಯಾಹ್ನ 1.30 ಗಂಟೆಗೆ**
**ಸ್ಥಳ: ವಿಕಾಸಸೌಧ ಕೊಠಡಿ ಸಂಖ್ಯೆ 419, ವಿಕಾಸಸೌಧ, ಬೆಂಗಳೂರು.**

# ಪತ್ರಿಕಾ ಪ್ರಕಟಣೆ
## PRESS RELEASE

## ರಾಜ್ಯದ ಮಾಜಿ ಮುಖ್ಯಮಂತ್ರಿಗಳಿಗೆ ಗೌರವ ಸಲ್ಲಿಸಲು ಆಗ್ರಹ

ಬೆಂಗಳೂರು, ಆಗಸ್ಟ್ 26 (ಕರ್ನಾಟಕ ವಾರ್ತೆ):

ರಾಜ್ಯದ ಅಭಿವೃದ್ಧಿಗೆ ಬಹುವಾಗಿ ಶ್ರಮಿಸಿದ ರಾಜ್ಯದ ಮಾಜಿ ಮುಖ್ಯಮಂತ್ರಿಗಳ ಭಾವಚಿತ್ರಗಳನ್ನು ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಾಕಿ ಅವರಿಗೆ ಗೌರವ ಸಲ್ಲಿಸುವ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ಸಭಾಪತಿ ಬಸವರಾಜ ಹೊರಟ್ಟಿ ಆಗ್ರಹ ಪೂರ್ವಕವಾಗಿ ವಿನಂತಿಸಿದ್ದಾರೆ. ಈ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರಿಗೆ ಸಭಾಪತಿ ಬಸವರಾಜ ಹೊರಟ್ಟಿಯವರು ಪತ್ರ ಬರೆದಿರುತ್ತಾರೆ.

ಹಲವಾರು ಮಾಜಿ ಮುಖ್ಯಮಂತ್ರಿಗಳ ಜನ್ಮ ದಿನ ಹಾಗೂ ನಿಧನರಾದ ದಿನಗಳಲ್ಲಿ ಅವರ ಪ್ರತಿಮೆಗಳು ಇಲ್ಲದ ಕಾರಣ, ಯಾವುದೇ ರೀತಿಯ ಗೌರವ ಸಲ್ಲಿಸುವಂತಹ ವ್ಯವಸ್ಥೆಗಳಿರುವುದಿಲ್ಲ. ಕ್ರಮವಾಗಿ ಕಡಿದಾಳ ಮಂಜಪ್ಪ, ಎಸ್.ಆರ್.ಕಂಠಿ, ಬಿ.ಡಿ.ಜತ್ತಿ, ಗುಂಡೂರಾವ್, ವೀರೇಂದ್ರ ಪಾಟೀಲ, ಬಂಗಾರಪ್ಪ, ರಾಮಕೃಷ್ಣ ಹೆಗಡೆ, ಎಸ್.ಆರ್.ಬೊಮ್ಮಾಯಿ, ಜೆ.ಎಚ್.ಪಟೇಲ ಮುಂತಾದ ಗಣ್ಯರಿಗೆ ಇಂತಹ ಗೌರವಗಳು ಸಿಗುತ್ತಿರುವುದಿಲ್ಲ.

ಈ ಹಿನ್ನೆಲೆಯಲ್ಲಿ, ದಿವಂಗತರಾಗಿರುವ ರಾಜ್ಯದ ಸನ್ಮಾನ್ಯ ಎಲ್ಲಾ ಮಾಜಿ ಮುಖ್ಯಮಂತ್ರಿಗಳಿಗೂ ಸಮಾನ ಗೌರವ ನೀಡುವ ಹಿನ್ನೆಲೆಯಲ್ಲಿ ಬ್ಯಾಂಕ್ವೆಟ್ ಹಾಲ್‌ನಲ್ಲಿ ರಾಜ್ಯದ ಎಲ್ಲಾ ಮುಖ್ಯಮಂತ್ರಿಗಳ ಪೂರ್ಣ ಪ್ರಮಾಣದ ಭಾವ ಚಿತ್ರಗಳನ್ನು ಅವರುಗಳ ಅವಧಿಗಳನ್ನು ನಮೂದಿಸಿ, ಅವರುಗಳಿಗೆ ಸಮಾನ ಗೌರವ ಸಲ್ಲಿಸುವಂತಹ ಕಾರ್ಯವನ್ನು ಇದೇ ತಿಂಗಳ 29 ರಂದು ರಾಮಕೃಷ್ಣ ಹೆಗಡೆಯವರ ಹುಟ್ಟು

ಹಬ್ಬದ ದಿನದಂದು ಈ ಕಾರ್ಯಕ್ರಮಕ್ಕೆ ನಾಂದಿ ಹಾಡುವಂತಾಗಲಿ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿಯವರು ಮುಖ್ಯಮಂತ್ರಿಗಳನ್ನು ಆಗ್ರಹಿಸಿ ಪತ್ರ ಬರೆದಿರುತ್ತಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಬೆಂಗಳೂರು–ವಿಜಯಪುರ ನಡುವೆ ಎ.ಸಿ ಸ್ಲೀಪರ್ ಸಾರಿಗೆ ಸೇವೆ

ಬೆಂಗಳೂರು, ಆಗಸ್ಟ್ 26 (ಕರ್ನಾಟಕ ವಾರ್ತೆ):

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ, ಬೆಂಗಳೂರು ಕೇಂದ್ರೀಯ ವಿಭಾಗದ ವತಿಯಿಂದ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಬೆಂಗಳೂರು–ವಿಜಯಪುರ ವಯಾ ತುಮಕೂರು, ಚಿತ್ರದುರ್ಗ, ಕೂಡ್ಲಗಿ, ಹೊಸಪೇಟೆ, ಇಳಕಲ್ ಮಾರ್ಗದಲ್ಲಿ ಎ.ಸಿ ಸ್ಲೀಪರ್ ಸಾರಿಗೆಯನ್ನು ಆಗಸ್ಟ್ 27 ರಿಂದ ಪ್ರಾರಂಭಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.

ವೇಳಾ ಪಟ್ಟಿ ಮತ್ತು ಪ್ರಯಾಣದರ ಬೆಂಗಳೂರು– ವಿಜಯಪುರ ಮಾರ್ಗವಾಗಿ (ಎ.ಸಿ ಸ್ಲೀಪರ್) ಬೆಂಗಳೂರು –ವಿಜಯಪುರ ಪ್ರಯಾಣ ದರ ವಯಸ್ಕರಿಗೆ 1050/– ನಿಗಧಿಪಡಿಸಿದ್ದು, ಬಸ್ಸು ಬೆಂಗಳೂರಿನಿಂದ ಹೊರಡುವ ಸಮಯ 20:30, ವಿಜಯಪುರ ತಲುಪುವ ಸಮಯ 06:15, ವಿಜಯಪುರದಿಂದ ಹೊರಡುವ ಸಮಯ 20:30, ಬೆಂಗಳೂರು ತಲುಪುವ ಸಮಯ 06:15 ಆಗಿರುತ್ತದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## A/C Sleeper service Bengaluru to Vijayapura

Bengaluru, August 26 (Karnataka Information):

Karnataka State Road Transport Corporation is operating A/C Sleeper service for the convenience of the travelling public on the route: Bengaluru to Vijayapura via Tumkuru, Chitradurga, Kudlagi, Hosapet, Ilkal w.e.f 27.08.2021. The Ticket fare and time table details are furnished as below:-

Bengaluru to Vijayapura (A/C Sleeper)

| Route | Adult Fare Rs. Ps | Departure From Bengaluru | Arrival at Vijayapura | Departure From Vijayapura | Arrival at Bengaluru |
|---|---|---|---|---|---|
| Bengaluru - Vijayapura | 1050/– | 2030 | 0615 | 2030 | 0615 |

# ರಾಷ್ಟ್ರ ಮಟ್ಟದ ಮಲ್ಟಿ ಕ್ಲಾಸ್ ಯೂತ್ ಸೇಲಿಂಗ್ ಚಾಂಪಿಯನ್‌ಶಿಪ್ ಸ್ಪರ್ಧೆ

ಬೆಂಗಳೂರು, ಆಗಸ್ಟ್ 26 (ಕರ್ನಾಟಕ ವಾರ್ತೆ):

ಮಂಡ್ಯ ಜಿಲ್ಲೆಯ, ಜಿಲ್ಲಾಡಳಿತದ ಸಂಪೂರ್ಣ ಸಹಕಾರದೊಂದಿಗೆ "ರಾಷ್ಟ್ರ ಮಟ್ಟದ ಮಲ್ಟಿ ಕ್ಲಾಸ್ ಯೂತ್ ಸೇಲಿಂಗ್ ಚಾಂಪಿಯನ್‌ಶಿಪ್ ಸ್ಪರ್ಧೆ"ಯನ್ನು ಭಾರತೀಯ ಸೇನೆಯ ಮದ್ರಾಸ್ ಇಂಜಿನಿಯರಿಂಗ್ ಗ್ರೂಪ್ ಮತ್ತು ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯ ಸಂಯುಕ್ತ ಸಹಭಾಗಿತ್ವದಲ್ಲಿ ಮಂಡ್ಯ ಜಿಲ್ಲೆಯ ಕೃಷ್ಣರಾಜ ಸಾಗರದ ಹಿನ್ನೀರಿನಲ್ಲಿ ಆಗಸ್ಟ್ 26 ರಿಂದ 31 ರವರೆಗೆ ಆಯೋಜಿಸಲಾಗುತ್ತಿದ್ದು, ಈ ಕಾರ್ಯಕ್ರಮದ ಉದ್ಘಾಟನೆಯು ದಿನಾಂಕ: 27/08/2021 ರಂದು ಸಂಜೆ 05:00 ಗಂಟೆಗೆ ಕೃಷ್ಣರಾಜ ಸಾಗರದ ಹಿನ್ನೀರಿನಲ್ಲಿ ನಡೆಯಲಿದೆ.

ಈ ಸ್ಪರ್ಧೆ ಯಾಚಿಂಗ್ ಅಸೋಸಿಯೇಶನ್ ಆಫ್ ಕರ್ನಾಟಕ ಹಾಗೂ ಯಾಚಿಂಗ್ ಅಸೋಸಿಯೇಶನ್ ಆಫ್ ಇಂಡಿಯಾ ಇವರಿಂದ ಮಾನ್ಯತೆ ಪಡೆದಿರುತ್ತದೆ. ಕೃಷ್ಣರಾಜ ಸಾಗರದ ಹಿನ್ನೀರಿನಲ್ಲಿ ರಾಷ್ಟ್ರೀಯ ಪ್ರಮಾಣತೆಯನ್ನು ಪಡೆದಿರುವ ಮೊದಲ ಸೇಲಿಂಗ್ ಚಾಂಪಿಯನ್ ಶಿಪ್ ಇದಾಗಿರುತ್ತದೆ. ಕಾರ್ಯಕ್ರಮದಲ್ಲಿ ದೇಶದಾದ್ಯಂತ ನಾವಿಕರು ಹಾಗೂ ತರಬೇತುದಾರರು ಸೇರಿದಂತೆ 200ಕ್ಕೂ ಹೆಚ್ಚು ಮಂದಿ ಭಾಗವಹಿಸಲಿದ್ದಾರೆ.

ನಾವಿಕರ ಸುರಕ್ಷತೆಯ ದೃಷ್ಟಿಯಿಂದ ಹಾಗೂ ಸರ್ಕಾರದ ಕೋವಿಡ್-19 ರ ಮಾರ್ಗಸೂಚಿಯನ್ವಯ ಸಾರ್ವಜನಿಕರಿಗೆ ಪ್ರವೇಶವಿರುವುದಿಲ್ಲ ಮತ್ತು ಆಹ್ವಾನಿತರಿಗೆ ಹಾಗೂ ನಾವಿಕರಿಗೆ, ಸಹಾಯಕ ಸಿಬ್ಬಂದಿಗಳಿಗೆ ಕಡ್ಡಾಯವಾಗಿ ಆರ್‌ಟಿಪಿಸಿಆರ್ ಪರೀಕ್ಷೆಯನ್ನು ನಡೆಸಿದ ನಂತರವೇ ಕಾರ್ಯಕ್ರಮಕ್ಕೆ ಪ್ರವೇಶ ನೀಡಲಾಗುವುದು.

ಭಾರತೀಯ ಸೇನೆಯ ಮದ್ರಾಸ್ ಇಂಜಿನಿಯರಿಂಗ್ ಗ್ರೂಪ್ ದಶಕಗಳಿಂದಲೂ ಭಾರತೀಯ ಸೇನೆಗೆ ಹಾಗೂ ದೇಶಕ್ಕಾಗಿ ಕ್ರೀಡಾಪಟುಗಳನ್ನು ಸಜ್ಜುಗೊಳಿಸುತ್ತಾ ಬಂದಿರುತ್ತದೆ. ಮುಂದಿನ ಮಿಷನ್ ಒಲಂಪಿಕ್ ದೃಷ್ಠಿಯಿಂದ ಈ ಕ್ರೀಡಾಕೂಟವು ಪ್ರಾಮುಖ್ಯತೆಯನ್ನು ಪಡೆದಿರುತ್ತದೆ. ಹಾಗೆಯೇ 1989 ರಲ್ಲಿ ಸ್ಥಾಪನೆಗೊಂಡ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯು ಸಾಹಸ ಕ್ರೀಡಾ ಕ್ಷೇತ್ರದಲ್ಲಿ ಹಾಗೂ ಒಲಂಪಿಕ್ ಕ್ರೀಡೆಗಳಾದ ಸ್ಪೋರ್ಟ್ಸ್ ಕ್ಲೈಬಿಂಗ್, ಕಯಾಕಿಂಗ್ ಮತ್ತು ಕೆನೋಯಿಂಗ್ ಕ್ರೀಡೆಗಳಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳನ್ನು ಸಜ್ಜುಗೊಳಿಸಿದ್ದು, ರಾಷ್ಟ್ರ ಮಟ್ಟದಲ್ಲಿ ಪದಕಗಳನ್ನು ಗಳಿಸಿರುತ್ತಾರೆ. ಆದ್ದರಿಂದ "ರಾಷ್ಟ್ರ ಮಟ್ಟದ ಮಲ್ಟಿ ಕ್ಲಾಸ್ ಯೂತ್ ಸೇಲಿಂಗ್ ಚಾಂಪಿಯನ್‌ಶಿಪ್ ಸ್ಪರ್ಧೆ"ಯಿಂದ ಸೇಲಿಂಗ್ ಬಗ್ಗೆ ಯುವಜನರಿಗೆ ಸೂಕ್ತ ತರಬೇತಿಯನ್ನು ನೀಡಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಸಜ್ಜುಗೊಳಿಸಲು ನೆರವಾಗುವುದು.

ಈ ಸ್ಪರ್ಧಾಕೂಟದಲ್ಲಿ ವಿವಿಧ ರೀತಿಯ 29er Class, 420 Class, Laser Radial Class, Laser 4.7 Class, RS: One class, Optimist Class ಸ್ಪರ್ಧೆಗಳನ್ನು ಆಯೋಜಿಸಲಾಗವುದು. ಈ ಗೂಗಲ್ ಲಿಂಕ್ ನಲ್ಲಿ https://drive.google.com/drive/folders/1pzanT2dtbZwLW7g91frCsNjwvF3Em6Z1?usp=sharing ವೀಡಿಯೋ ಮತ್ತು ಛಾಯಾಚಿತ್ರಗಳನ್ನು ಪಡೆಯಬಹುದಾಗಿರತ್ತದೆ.

# Civil Judges Recruitment

Bengaluru, August 26 (Karnataka Information):

The Intimation No. HCRB/CJR 1/ 2021 dated 25-08-2021 is published in the official Web-site at www.karnatakajudiciary.kar.nic.in with regard to the list of candidates who are successful in the Preliminary Examination to post of Civil Judges vide Notification No. HCRB/CJR 1/ 2021 dated 26-03-2021.

The list Of the candidates who are successful in the Preliminary Examination held on 10-08-2021 for the post of Civil Judges by direct recruitment as per Annexure is published on the High Court of Karnataka website: http://karnatakajudiciary.kar.nic.in/recruitment.php.

The successful candidates belonging to Scheduled Caste, Scheduled Tribe and Category-I shall remit Rs.500/- (Rupees Five hundred only) and others shall remit Rs.1000/- (Rupees one thousand only) towards Main Written Examination Fee by visiting the above said website through Online /Challan payment on or before 09-09-2021 to become eligible for Main Written Examination, failing which, their candidature will not be considered for Main Written Examination.

Main Written Examination for the eligible candidates will be held at Bengaluru On Thursday, the 30th September 2021 and Friday, the 1st October 2021.

## ಬಿ.ಎಂ.ಟಿ.ಸಿಯಿಂದ ಮಾಸಿಕ ಪಾಸುಗಳ ವಿತರಣೆ

ಬೆಂಗಳೂರು, ಆಗಸ್ಟ್ 26 (ಕರ್ನಾಟಕ ವಾರ್ತೆ):

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು, ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ರಿಯಾಯಿತಿ ದರದಲ್ಲಿ ಕ್ಯಾಲೆಂಡರ್ ಮಾಹೆಗನುಗುಣವಾಗಿ ಮಾಸಿಕ ಪಾಸುಗಳನ್ನು ವಿತರಣೆ ಮಾಡಲಾಗುತ್ತಿದ್ದು, ಮಾಸಿಕ ಪಾಸುಗಳಲ್ಲಿ ಪ್ರಯಾಣಿಕರು ಅನಿಯಮಿತವಾಗಿ ಪ್ರಯಾಣಿಸಬಹುದಾಗಿರುತ್ತದೆ.

ಸೆಪ್ಟೆಂಬರ್–2021 ರ ಮಾಹೆಯ ಮಾಸಿಕ ಪಾಸುಗಳನ್ನು 28.08.2021 ರಿಂದ ವಿತರಣೆ ಮಾಡಲು ಕ್ರಮ ಕೈಗೊಂಡಿದ್ದು, ಸಾರ್ವಜನಿಕರಿಗೆ ಸುಲಭವಾಗಿ ಹಾಗೂ ತ್ವರಿತವಾಗಿ ಮಾಸಿಕ ಪಾಸುಗಳು ದೊರಕಲು ಅನುಕೂಲವಾಗುವಂತೆ ಸಂಸ್ಥೆಯ ಟಿಟಿಎಂಸಿ ಮತ್ತು ಬಸ್ ನಿಲ್ದಾಣಗಳಲ್ಲಿ ಮಾಸಿಕ

ಪಾಸುಗಳನ್ನು ವಿತರಣೆ ಮಾಡಲಾಗುತ್ತಿದೆ. ಅಲ್ಲದೆ, ಬೆಂಗಳೂರು ಒನ್ ಕೇಂದ್ರಗಳಲ್ಲಿ ಹಾಗೂ ಬೆಂಗಳೂರಿನ ಖಾಸಗಿ ಏಜನ್ಸಿಗಳ ಮೂಲಕ ಮಾಸಿಕ ಪಾಸುಗಳು ವಿತರಿಸಲಾಗುತ್ತಿದೆ ಎಂದು ಸಾರ್ವಜನಿಕ ಸಂಪರ್ಕಾಧಿಕಾರಿ, ಬಿ.ಎಂ.ಟಿ.ಸಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## BMTC - Issuing of Monthly passes

Bengaluru, August 26 (Karnataka Information):

BMTC is issuing monthly passes at a discount rate according to calendar months for the benefit of public passengers, in which passengers are allowed for unlimited travel.

Steps have been taken to issue the September-2021 monthly passes from 28.08.2021. Further, for quick and easy availability of monthly passes the following measures are been initiated.

- BMTC is issuing monthly passes at TTMCs and bus stand,
- All Bengaluru One Centers and private agencies in Bangalore

## ಪಿಹೆಚ್.ಡಿ ಪದವಿ ಪ್ರಧಾನ

ಬೆಂಗಳೂರು ಆಗಸ್ಟ್ 26 (ಕರ್ನಾಟಕ ವಾರ್ತೆ) :

ಭರತ್ ಕೆ.ಎ ಅವರು ಮೈಸೂರು ವಿಶ್ವವಿದ್ಯಾನಿಲಯದ ಡಾ. ಆರ್. ಸುಂದರ ರಾಜನ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ, ಆಂಗ್ಲ ಭಾಷೆಯಲ್ಲಿ ಸಾದರಪಡಿಸಿದ "Pre and Post Merger Financial Performance Analysis of state Bank of India and its Associate banks" ಎಂಬ ಮಹಾಪ್ರಬಂಧವನ್ನು ನಿರ್ವಹಣಾ ವಿಷಯದಡಿ ಪಿಹೆಚ್.ಡಿ ಪದವಿಗಾಗಿ ಅಂಗೀಕರಿಸಲಾಗಿದೆ. ಶ್ರೀಯುತರಿಗೆ ಪಿಹೆಚ್.ಡಿ ಪದವಿಯನ್ನು ಮುಂದೆ ನಡೆಯುವ ವಾರ್ಷಿಕ ಘಟಿಕೋತ್ಸವದಲ್ಲಿ ನೀಡಲಾಗುವುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ವಾಯು ಗುಣಮಟ್ಟ ಮಾಪನ ಕೇಂದ್ರಗಳ ವಾಯು ಗುಣಮಟ್ಟ ಸೂಚ್ಯಂಕ

ಬೆಂಗಳೂರು, ಆಗಸ್ಟ್ 26 (ಕರ್ನಾಟಕ ವಾರ್ತೆ):

**ವಾಯುಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು**

**ದಿನಾಂಕ: 26.8.2021 (Average of past 24 hours)**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 32 | ಉತ್ತಮ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 46 | ಉತ್ತಮ | CO |
| 3 | ಕವಿಕ, ಮೈಸೂರುರಸ್ತೆ | 51 | ತೃಪ್ತಿಕರ | $PM_{2.5}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 33 | ಉತ್ತಮ | CO |

| | | | | |
|---|---|---|---|---|
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 62 | ತೃಪ್ತಿಕರ | CO |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 61 | ತೃಪ್ತಿಕರ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿವನಗರ | 50 | ಉತ್ತಮ | $PM_{10}$ |
| **(26.8.2021 at 11.05 AM)** | | | | |
| 8 | BWSSB,ಕಾಡಬೀಸನಹಳ್ಳಿ | 50 | ಉತ್ತಮ | $PM_{10}$ |
| 9 | ಪೀಣ್ಯ | 51 | ತೃಪ್ತಿಕರ | $PM_{2.5}$ |
| 10 | ಬಿಟಿಎಂ ಲೇಔಟ್ | 72 | ತೃಪ್ತಿಕರ | CO |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮ ಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |

## AQI of the CAAQM stations established in Bengaluru City

**Date : 26.8.2021 (Average of past 24 hours)**

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 32 | Good | $PM_{10}$ |
| 2 | Jayanagar 5th Block, Shalini ground | 46 | Good | CO |
| 3 | KAVIKA, Mysore Road | 51 | Satisfactory | $PM_{2.5}$ |

| | | | | |
|---|---|---|---|---|
| 4 | Rajeev Gandhi Institute of Chest Disease, NIMHANS, Hombegowda Nagar | 33 | Good | CO |
| 5 | HSR Layout, near Central Silkboard | 62 | Satisfactory | CO |
| 6 | City Railway Station, Magestic, Bengaluru | 61 | Satisfactory | $PM_{10}$ |
| 7 | Saneguruvanahalli, NisargaBhavan, KSPCB, Shivanagara | 50 | Good | $PM_{10}$ |
| **(26.8.2021 at 11.05 AM)** | | | | |
| 8 | BWSSB, Kadabesanahalli | 50 | Good | $PM_{10}$ |
| 9 | Peenya | 51 | Satisfactory | $PM_{2.5}$ |
| 10 | BTM Layout | 72 | Satisfactory | CO |

| **Category (Range)** | **Possible Health Impacts** | **Category (Range)** | **Possible Health Impacts** |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |